ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

**ಸಿ.ಸಿ. ಸಂಖ್ಯೆಃ 620/2014**

ಪಿ.ಡಬ್ಲ್ಯೂ- **01** ಸಿ.ಡಬ್ಲ್ಯೂ- **01**

ದಿಃ 16.02.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಶ್ರೀ ಪಿ.ಎಲ್.ಕೆ ವಕೀಲರಿಂದಃ

ಆರೋಪಿಯ ವಿರುದ್ಧ ದೂರು ಸಲ್ಲಿಸಲು ನನಗೆ ನಮ್ಮ ಮೇಲಧಿಕಾರಿಗಳಿಂದ ಲಿಖಿತ ಆದೇಶ ಬಂದಿತ್ತು. ಸದರಿ ದಾಖಲೆಯನ್ನು ನಾನು ತನಿಖೆಯ ಕಾಲಕ್ಕೆ ಪೋಲಿಸರಿಗೆ ಕೊಟ್ಟಿರುತ್ತೇನೆ. ನಾನು ಹುಣಸೂರು ಶಾಖೆಯಲ್ಲಿ ಕೆಲಸ ಮಾಡುತ್ತಿದ್ದಾಗ ಬ್ಯಾಂಕಿನಲ್ಲಿ 10-12 ಸಿಬ್ಬಂದಿಗಳು ಕೆಲಸ ಮಾಡುತ್ತಿದ್ದರು. ಬ್ಯಾಂಕಿನಲ್ಲಿಯ ಚೆಕ್ಕು ಮತ್ತು ವಿತ್ ಡ್ರಾವಲ್ ಗಳ ಪ್ರೊಸೆಸ್ ಗಳನ್ನು ಸಿಬ್ಬಂದಿಗಳೇ ಮಾಡುತ್ತಿದ್ದರು. ಚೆಕ್ಕುಗಳ ಮತ್ತು ವಿತ್ ಡ್ರಾವಲ್ ಗಳಲ್ಲಿಯ ಗ್ರಾಹಕರ ಸಹಿಗಳನ್ನು ಸಂಬಂಧಪಟ್ಟ ಸಿಬ್ಬಂದಿಯೇ ಪರಿಶೀಲಿಸುತ್ತಿದ್ದರು. ದಿನನಿತ್ಯದ ಬ್ಯಾಂಕಿನ ಸಾಮಾನ್ಯ ವ್ಯವಹಾರದಲ್ಲಿ ಗ್ರಾಹಕರು ಹಣ ಜಮೆ ಮಾಡುವಾಗ ಅಥವಾ ಹಿಂಪಡೆಯುವಾಗ ಬ್ಯಾಂಕಿನಲ್ಲಿಯ ಸಿಬ್ಬಂದಿಗಳೊಂದಿಗೆ ಹೆಚ್ಚಿನ ಸಂಪರ್ಕವನ್ನು ಹೊಂದಿದ್ದು, ವ್ಯವಸ್ಥಾಪಕರೊಂದಿಗೆ ಸಂಪರ್ಕ ಹೊಂದಿರುವುದಿಲ್ಲ ಎನ್ನುವುದು ನಿಜ.

ನಾನು ಹುಣಸೂರು ಶಾಖೆಯಲ್ಲಿಯ ಕರ್ನಾಟಕ ಬ್ಯಾಂಕಿನಲ್ಲಿ 11.02.2011 ರಿಂದ 10.05.2015 ರ ವರೆಗೆ ವ್ಯವಸ್ಥಾಪಕ ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ. ನನ್ನ ಅವಧಿಗಿಂತ ಮೊದಲು ಆರೋಪಿಯೇ ಸದರಿ ಬ್ಯಾಂಕಿನ ವ್ಯವಸ್ಥಾಪಕರಾಗಿದ್ದರು. ನಾನು ಆರೋಪಿಯಿಂದಲೇ ಚಾರ್ಜ್ ಅನ್ನು ವಹಿಸಿಕೊಂಡಿರುತ್ತೇನೆ. ನಾವು ಬ್ಯಾಂಕಿನ ಚಾರ್ಜ್ ಅನ್ನು ಪಡೆಯುವಾಗ ಹಿಂದಿನ ವ್ಯವಸ್ಥಾಪಕರ ಅವಧಿಯಲ್ಲಿ ನಡೆದ ಎಲ್ಲ ವ್ಯವಹಾರಗಳ ಕುರಿತು ತಿಳಿದುಕೊಂಡು ಚಾರ್ಜ್ ಅನ್ನು ಪಡೆಯ ಬೇಕಾಗುತ್ತದೆ ಎನ್ನುವುದು ಸರಿಯಲ್ಲ. ನಾನು ದಿಃ 11.02.2011 ರಂದು ಬ್ಯಾಂಕಿನ ಚಾರ್ಜ್ ಅನ್ನು ಪಡೆಯುವಾಗ ನಂತರದ ಸುಮಾರು 45 ದಿನಗಳ ಕಾಲ ಬ್ಯಾಂಕಿನ ಎಲ್ಲ ದಾಖಲಾತಿಗಳನ್ನು ಪರಿಶೀಲಿಸಿ ಚಾರ್ಜ್ ಪಡೆದಿದ್ದೆ ಎನ್ನುವುದು ನಿಜ. ಆ ಸಮಯದಲ್ಲಿ ನಿ.ಪಿ. 1 ದೂರಿನಲ್ಲಿ ವಿವರಿಸಿದಂತಹ

ಲೋಪದೋಷಗಳು ನನಗೆ ಕಂಡು ಬಂದಿರಲಿಲ್ಲ. ನಾನು ಬ್ಯಾಂಕಿನ ಚಾರ್ಜ್ ಅನ್ನು ವಹಿಸಿಕೊಂಡ ಸುಮಾರು 8 ತಿಂಗಳ ನಂತರ ಅಂದರೆ ದಿಃ 20.12.2011 ರಂದು ಮೊದಲ ಬಾರಿಗೆ ರಾಜಮ್ಮ ಎನ್ನುವವರು ದೂರು ಸಲ್ಲಿಸಿದ್ದರು. ಆ ನಡುವಿನ ಅವಧಿಯಲ್ಲಿ ನನಗೆ ಆರೋಪಿಯ ಕುರಿತು ಹಣ ದುರುಪಯೋಗದ ದೂರನ್ನು ಯಾರು ಲಿಖಿತವಾಗಿ ಕೊಟ್ಟಿರಲಿಲ್ಲ. ಆದರೆ, ಮೌಖಿಕವಾಗಿ ಹೇಳಿದ್ದರು. ನನಗೆ ಮೌಖಿಕವಾಗಿ ದೂರು ಬಂದಿದ್ದಾಗ ಯಾವುದೇ ತನಿಖೆಯನ್ನು ಮಾಡಿರಲಿಲ್ಲ. ಸಾಕ್ಷಿ ಹೇಳುತ್ತಾರೆ ನಮಗೆ ಲಿಖಿತ ದೂರು ಇಲ್ಲದೇ ಇರುವುದರಿಂದ ಯಾವುದೇ ತನಿಖೆಯನ್ನು ಮಾಡಲು ಆಗುವುದಿಲ್ಲ. ಆರೋಪಿ ಯಾವುದೇ ಬ್ಯಾಂಕಿನ ಹಣವನ್ನು ದುರುಪಯೋಗ ಪಡಿಸಿಕೊಂಡಿಲ್ಲ ಎನ್ನುವುದು ಸರಿಯಲ್ಲ.

ಈ ಸಮಯದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.